**ಕರ್ನಾಟಕ ಸರ್ಕಾರ**
**ಉಪ ನಿರ್ದೇಶಕರ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ**
ಕೋಣೆ ಸಂಖ್ಯೆ: ಸಿ-17, ಒಂದನೇ ಮಹಡಿ, ಜಿಲ್ಲಾಡಳಿತ ಭವನ ಸಂಕೀರ್ಣ, ಚಿತ್ತಾಪುರ ರಸ್ತೆ, ಯಾದಗಿರಿ-585202
Email_ID :ddwcdyad@gmail.com ಫೋನ್ : 08473-253739

---

ಸಂಖ್ಯೆ: ಉನಿಯಾ/ಮಮಅಇ/ಅಕ್ಕ ಪಡೆ/ಉಪಪ್ರು/ /2025-26 ದಿನಾಂಕ:06.11.2025

**: "ಅಕ್ಕ ಪಡೆ" ಅರ್ಜಿ ಆಹ್ವಾನ ಉಚಿತ ಪ್ರಕಟಣೆ:**

**ವಿಷಯ:-** ಜಿಲ್ಲೆಯಲ್ಲಿ 2025-26ನೇ ಸಾಲಿನಿಂದ 'ಅಕ್ಕ ಪಡೆ' ಯೋಜನೆಯನ್ನು ಅನುಷ್ಠಾನಗೊಳಿಸಲು National Cadet Corps (NCC) ಯಲ್ಲಿ 'C" ಪ್ರಮಾಣ ಪತ್ರ ಪಡೆದಿರುವ ಮಹಿಳಾ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:-**

1) ಸರ್ಕಾರದ ಆದೇಶ ಸಂಖ್ಯೆ: ಮಮಇ 135ಮಮಅ 2025 ಬೆಂಗಳೂರು, ದಿನಾಂಕ: 15.09.2025
2) ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಮಮಅಇ/ಮಕವಿ/ವಿಘ/ಅಕ್ಕ ಪಡೆ/05/2025-26 ದಿನಾಂಕ: 30.10.2025.
3) ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಯಾದಗಿರಿ ಜಿಲ್ಲೆ ರವರ ಕಡತ ಅನುಮೋದನೆ ದಿನಾಂಕ:06.11.2025

*******

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರ ಸರ್ಕಾರದ ಆದೇಶ ಹಾಗೂ ಅನುಬಂಧದಲ್ಲಿ ವಿವರಿಸಿದ ಉದ್ದೇಶ, ನಿಯಮಗಳು ಹಾಗೂ ಆಯ್ಕೆಯ ಮಾನದಂಡಗಳಿಗೆ ಒಳಪಟ್ಟು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲು ದಿನಪತ್ರಿಕೆಗಳಲ್ಲಿ ಉಚಿತ ಪತ್ರಿಕ ಪ್ರಕಟಣೆ ನೀಡಲು ಕೋರಿದೆ.

ಜಿಲ್ಲೆಯಲ್ಲಿ ಅಪಾಯದಲ್ಲಿರುವ ಅಥವಾ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವ ಪ್ರಾಥಮಿಕ ಉದ್ದೇಶದಿಂದ ಅನುಷ್ಠಾನಗೊಳ್ಳುತ್ತಿರುವ ಅಕ್ಕ ಪಡೆ ಯೋಜನೆಯಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು NCC ಯಲ್ಲಿ "C" ಪ್ರಮಾಣಪತ್ರ ಪಡೆದಿರುವ, ದೈಹಿಕ ಸದೃಢತೆ ಹೊಂದಿರುವ, ಉತ್ತಮ ನಡವಳಿಕೆ, ಸಂವಹನ ಕಲೆ, ಕಾರ್ಯ ದಕ್ಷತೆ ಉಳ್ಳ ಮತ್ತು ಪಾಳಿಗಳಲ್ಲಿ ಕೆಲಸ ನಿರ್ವಹಿಸಲು ಸಿದ್ಧರಿರುವ 35 ರಿಂದ 45 ವಯೋಮಾನದ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸದರಿ ಹುದ್ದೆಯು ಗುತ್ತಿಗೆ ಅವಧಿ 11 ತಿಂಗಳಿಗೆ ಸೀಮಿತವಾಗಿದ್ದು ಕರ್ತವ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ ಸೇವೆಯನ್ನು ಮುಂದುವರರಿಸಲಾಗುವುದು.

ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಛೇರಿ ಹಾಗೂ NIC ಯಾದಗಿರಿ website http://yadgir.nic.in ನಲ್ಲಿ ಪಡೆದು, ಅಗತ್ಯ ದಾಖಲಾತಿಗಳೊಂದಿಗೆ ಸದರಿ ಅರ್ಜಿಯನ್ನು 12-ನವೆಂಬರ್-2025ರ ಸಂಜೆ 5 ಗಂಟೆಯೊಳಗೆ ಉಪ ನಿರ್ದೇಶಕರ ಕಛೇರಿಯಲ್ಲಿ ಸಲ್ಲಿಸಬೇಕು.

**ಹೆಚ್ಚಿನ ಮಾಹಿತಿಗಾಗಿ : ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಣೆ ಸಂಖ್ಯೆ: C-17, 01ನೇ ಮಹಡಿ, ಮಿನಿ ವಿಧಾನ ಸೌಧ, ಯಾದಗಿರಿ ಅವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯಾದಗಿರಿ ಇವರು ತಿಳಿಸಿದ್ದಾರೆ.**

**ಉಪ ನಿರ್ದೇಶಕರು**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

**ಪ್ರತಿಯನ್ನು :**

1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ರವರ ದಯಾಪರ ಮಾಹಿತಿಗಾಗಿ.
3. ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು, ಪೊಲೀಸ್ ಇಲಾಖೆ ಯಾದಗಿರಿ ರವರ ದಯಾಪರ ಮಾಹಿತಿಗಾಗಿ
4. ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಜಿಲ್ಲಾ NIC website http://yadgir.nic.in ನಲ್ಲಿ ಅಳವಡಿಸಲು ಅನುಮತಿಯನ್ನು ನೀಡಲು ಕೋರಿದೆ.
5. ಜಿಲ್ಲಾ ಇನ್‌ಫೋರ್ಮೆಟಿಕ್ಸ್ ಅಧಿಕಾರಿಗಳು, NIC ಯಾದಗಿರಿ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಜಿಲ್ಲಾ website http://yadgir.nic.in ನಲ್ಲಿ ಅಳವಡಿಸಲು ಕೋರಿದೆ.
6. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಯಾದಗಿರಿ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಉಚಿತವಾಗಿ ದಿನಪತ್ರಿಕೆಗಳಲ್ಲಿ ಜಾಹೀರಾತುಗೊಳಿಸಲು ಕೋರಿದೆ.
7. ಕಛೇರಿ ಕಡತ

Scanned with OKEN Scanner

# ಅರ್ಜಿ ನಮೂನೆ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## "ಅಕ್ಕ ಪಡೆ" ಹುದ್ದೆಯ ಅರ್ಜಿ

ಇತ್ತೀಚಿನ
ಪಾಸ್‌ಪೋರ್ಟ್
ಅಳತೆಯ ಭಾವಚಿತ್ರ

ಜಿಲ್ಲೆಯ ಹೆಸರು : ಯಾದಗಿರಿ ಜಿಲ್ಲೆ

| | | |
|---|---|---|
| 01 | ಅಭ್ಯರ್ಥಿಯ ಹೆಸರು | |
| 02 | ತಂದೆಯ ಹೆಸರು | |
| 03 | ತಾಯಿಯ ಹೆಸರು | |
| 04 | ವಿಳಾಸ,ಮೊಬೈಲ್ ಸಂಖ್ಯೆ ಮತ್ತು ಈ–ಮೇಲ್ | ಈ–ಮೇಲ್: <br> ಮೊಬೈಲ್ <br> ಜಿ   ಪಿನ್ ಕೋಡ್ |
| 05 | ಜನ್ಮ ದಿನಾಂಕ (ದಿನಾಂಕ/ತಿಂಗಳು/ವರ್ಷ) | / / |
| 06 | ವೈವಾಹಿಕ ಸ್ಥಿತಿ (ವಿವಾಹಿತ/ಅವಿವಾಹಿತ/ವಿಧವೆ) | |
| 07 | ರಾಷ್ಟ್ರೀಯತೆ | |
| 08 | ಜಾತಿ–ಉಪಜಾತಿ–ವರ್ಗ | |
| 10 | ವಿದ್ಯಾರ್ಹತೆ | |
| 11 | NCCಯಲ್ಲಿ ಪಡೆದ "C" (ಪ್ರಮಾಣ ಪತ್ರ ಲಗತ್ತಿಸುವುದು) | |
| 12 | ಈ ಅರ್ಜಿಯೊಂದಿಗೆ ಲಗತ್ತಿಸಬೇಕಾದ ಸ್ವಯಂ ದೃಢೀಕೃತ ದಾಖಲಾತಿಗಳು | |
| | 1. ಎಸ್.ಎಸ್.ಎಲ್.ಸಿ ಅಂಕಪಟ್ಟಿ | |
| | 2. ಪ.ಪೂರ್ವ/ಪದವಿ/ಸ್ನಾತಕೋತ್ತರ/ಪದವಿಯ ಎಲ್ಲಾ ಸೆಮಿಸ್ಟರ್/ವರ್ಷದ ಅಂಕಪಟ್ಟಿಗಳು | |
| | 3. NCCಯಲ್ಲಿ ಪಡೆದ C | |
| | 4. ವಿಶೇಷ ಅರ್ಹತೆಗೆ ಸಂಬಂಧ ಪಟ್ಟ ದಾಖಲೆಗಳು | |

**ದೃಢೀಕರಣ :**

ಈ ಅರ್ಜಿಯಲ್ಲಿ ನಾನು ನೀಡಿರುವ ಎಲ್ಲಾ ಮಾಹಿತಿಗಳು ನನ್ನ ಜ್ಞಾನ ಮತ್ತು ಗ್ರಹಿಕೆಯ ಮಟ್ಟಿಗೆ ಸತ್ಯ, ಸಂಪೂರ್ಣ ಮತ್ತು ಸರಿಯಾದವುಗಳೆಂದು ಆಯ್ಕೆಗೆ ಮೊದಲು ಅಥವಾ ನಂತರ ನಾನು ನೀಡಿರುವ ಮಾಹಿತಿಯು ತಪ್ಪೆಂದು ಅಥವಾ ನಾನು ಅನರ್ಹ ಎಂದು ಕಂಡು ಬಂದರೆ ನನ್ನ ಅರ್ಜಿಯನ್ನು ತಿರಸ್ಕರಿಸಲು ಹಾಗೂ ನನ್ನ ವಿರುದ್ಧ ಕ್ರಮ ಜರುಗಿಸಬಹುದಾಗಿರುತ್ತದೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ :

ಸ್ಥಳ :

ಅಭ್ಯರ್ಥಿಯ ಸಹಿ